ಮಾಡುವುದಕ್ಕೆ ಅಧಿಕಾರವಿತ್ತು. ಸಮಾಜ ಕಲ್ಯಾಣ ಇಲಾಖೆ ತೀರ್ಮಾನ ಮಾಡಿದೆ. ನಾವೇ Nodal Agency ಆಗಿ ಪ್ರತಿ ವರ್ಷ ಜಿಲ್ಲೆಯಲ್ಲಿ review ಮಾಡಿ ಯಾವ ಯಾವುದು ಗೊಲ್ಲರಹಟ್ಟಿಗಳಿವೆ ಅಥವಾ ಬೇಚರಕ್ ವಿಲೇಜ್‌ಗಳಿವೆ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ನಾವೇ ಕಂದಾಯ ಇಲಾಖೆಯಿಂದ ಶಿಫಾರಸು ಮಾಡಿ ಅದನ್ನು regularize ಮಾಡಿಸುತ್ತೇವೆ. ಉಳಿದಂತೆ ವಿಶೇಷವಾಗಿ ಅವರಿಗೆ ಸವಲತ್ತನ್ನು ಕೊಡಬೇಕೆನ್ನುವ ಅಪೇಕ್ಷ ಇದೆ. ಅವರಿಗೇನು benefit ಕಡಿಮೆ ಇದೆ ಅದನ್ನು ಹೆಚ್ಚು ಮಾಡಿ, ಅವರ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆ ಕೊಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: 2 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಈಗಾಗಲೇ ಹೇಳಿದ್ದೀರಿ.

ಅಧ್ಯಕ್ಷರು: ತಾವು ಗಮನ ಸೆಳೆಯಬೇಕು.

ಶ್ರೀ ಎ. ನಾರಾಯಣಸ್ವಾಮಿ: ಈ ಸಾರಿ ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ಇಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಸಾವಿರಾರು ಗೊಲ್ಲರಹಟ್ಟಿಗಳಿವೆ. ಅದರ ಜೊತೆಗೆ 73 ಉಪ ಜಾತಿಗಳಿವೆ ಎಂದು ಹೇಳಿದಿರಿ. ಅವರಿಗೆ 5 ಕೋಟಿ ರೂಪಾಯಿಗಳನ್ನು ಇಟ್ಟರೆ ಆಗುವುದಿಲ್ಲ. ಪೂರ್ಣ ಬಜೆಟ್ ಮಂಡಿಸುವಾಗ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ.

ಶ್ರೀ ಎ. ನಾರಾಯಣಸ್ವಾಮಿ: ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡುತ್ತೇನೆ. ಅವರು ಇರುವುದೇ 5-8 ಲಕ್ಷ. ಬಜೆಟ್‌ನಲ್ಲಿ ಚರ್ಚೆ ಮಾಡಿ ಮುಖ್ಯಮಂತ್ರಿಯವರ ಮನವೊಲಿಸಿ ಕೊಡೋಣ.

ಆ) ವಿಷಯ: ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಂಟ್ವಾಳ ತಾಲ್ಲೂಕಿನ ಸಜಪನಾಡು ಗ್ರಾಮದ ಕಂಚಿನಡ್ಕಪದಲ್ಲಿ ಸುವ್ಯವಸ್ಥಿತವಾದ ಸರ್ಕಾರಿ ಶಾಲೆಗಳು, ಸಾರ್ವಜನಿಕ ಸೌಲಭ್ಯಗಳು, ವಿವಿಧ ಮತಗಳ ಧಾರ್ಮಿಕ ಕೇಂದ್ರಗಳು ಇದ್ದು, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಕಾಲೋನಿ ಹಾಗೂ ಜನ ವಸತಿ ಪ್ರದೇಶದಲ್ಲಿ ಘನ ತ್ಯಾಜ್ಯ ವಿತರಣಾ ಘಟಕವನ್ನು ಸ್ಥಾಪಿಸುವುದರಿಂದ ಪರಿಸರ ಮಾಲಿನ್ಯ ಹೆಚ್ಚಾಗುವ ಬಗ್ಗೆ.

\- - -

ಶ್ರೀ ಯು.ಟಿ. ಖಾದರ್ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಂಟ್ವಾಳ ತಾಲ್ಲೂಕಿನ ಸಜಪನಾಡು ಗ್ರಾಮದ ಕಂಚಿನಡ್ಕಪದಲ್ಲಿ ಸುವ್ಯವಸ್ಥಿತವಾದ ಸರ್ಕಾರಿ ಶಾಲೆಗಳು, ಸಾರ್ವಜನಿಕ ಸೌಲಭ್ಯಗಳು, ವಿವಿಧ ಮತಗಳ ಧಾರ್ಮಿಕ ಕೇಂದ್ರಗಳು ಇದ್ದು, ಪರಿಶಿಷ್ಟ ವರ್ಗ

ಮತ್ತು ಪರಿಶಿಷ್ಟ ಜಾತಿಯ ಕಾಲೋನಿ ಹಾಗೂ ಜನ ವಸತಿ ಪ್ರದೇಶದಲ್ಲಿನ ಘನ ತ್ಯಾಜ್ಯ ವಿತರಣಾ ಘಟಕವನ್ನು ಸ್ಥಾಪಿಸುವುದರಿಂದ ಪರಿಸರ ಮಾಲಿನ್ಯ ಹೆಚ್ಚಾಗುವ ಬಗ್ಗೆ ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ಸಜಪನಡು ಗ್ರಾಮದ ಕಂಚಿನಡ್ಕಪದವು ಎಂಬಲ್ಲಿ ಸರ್ವೆ ನಂ. 109/1ಪಿ1 ಮತ್ತು 110/1ಪಿ1ರಲ್ಲಿ ಬಂಟ್ವಾಳ ಪುರಸಭೆಗೆ ಒಟ್ಟು 8.55 ಎಕರೆ ಜಮೀನನ್ನು ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಮಂಜೂರಾಗಿರುತ್ತದೆ. ಈ ಬಗೆಗೆ ಪರಿಸರ ಇಲಾಖೆಯಿಂದ ಅನುಮತಿ ಪತ್ರವನ್ನು ಪಡೆಯಲಾಗಿದೆ. ಸದರಿ ಜಮೀನಿನ ಸ್ವಲ್ಪ ದೂರದಲ್ಲಿ ಶಾಲಾ ಕಟ್ಟಡವಿದ್ದು, ಮಕ್ಕಳ ಸಂಖ್ಯೆ ಕಡಿಮೆ, ಇರುವುದರಿಂದ ಪಕ್ಕದ ಇರಾ ಗ್ರಾಮದ ಶಾಲೆಗೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ. ಪರಿಶಿಷ್ಟ ವರ್ಗ/ಜಾತಿಯ ಯಾವುದೇ ಕಾಲೋನಿಗಳು ಇರುವುದಿಲ್ಲ. ಮದರ್‌ಸಾ ಕಟ್ಟಡವು ಸದರಿ ಜಾಗದಿಂದ ಬಹಳ ದೂರದಲ್ಲಿರುತ್ತದೆ. ತ್ಯಾಜ್ಯ ವಿಲೇವಾರಿ ಜಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಲಾಗಿರುತ್ತದೆ. ನೀರಿನ ವ್ಯವಸ್ಥೆಗಾಗಿ ಕೊಳವೆ ಬಾವಿಯನ್ನು ಸಹ ಕೊರೆಯಲಾಗಿದೆ. ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ವಿಲೇವಾರಿಗಾಗಿ ರೂ. 120 ಲಕ್ಷಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಎಸ್.ಎಫ್.ಸಿ. ಅನುದಾನದಲ್ಲಿ ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಎಚ್.ಡಿ.ಪಿ.ಇ. ಲೈನರ್‌ವುಳ್ಳ ಪಿಟ್‌ಗಳಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಲೀಚೇಟ್ ಸಂಗ್ರಹಣೆಗೆ ಲೀಚೇಟ್ ನಿರ್ಮಿಸಲು ಹಾಗೂ ಸದರಿ ನಿವೇಶನ ಸುತ್ತಲು ಗಿಡಗಳನ್ನು ನೆಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಘನತ್ಯಾಜ್ಯ ವಸ್ತು ವಿಲೇವಾರಿಯನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರ ಇಲಾಖೆಯ ಮಾರ್ಗಸೂಚಿಯಂತೆ ಮಾಡಲಾಗುವುದು. ಇದರಿಂದ ಸಾರ್ವಜನಿಕ ಆರೋಗ್ಯ ಹದಗೆಡುವುದಿಲ್ಲ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಕಾನೂನಿನ ಅಡಿಯಲ್ಲಿನ ಪೌರಘನತ್ಯಾಜ್ಯ ವಸ್ತು ನಿರ್ವಹಣಾ ನಿಯಮಗಳ ಅನುಗುಣವಾಗಿ ನಿರ್ವಹಿಸಲಾಗುವುದರಿಂದ ಪರಿಸರ ಮಾಲಿನ್ಯ ಉಂಟಾಗುವುದಿಲ್ಲ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಉತ್ತರ ಸಿಕ್ಕಿದೆ ಆದರೆ ಈ ಉತ್ತರ ಸಮಾಧಾನಕರವಾಗಿಲ್ಲ ಬಹುಶಃ ನಮಗೆ ಅನ್ಯಾಯವಾಗಿದೆ. ಉತ್ತರದಲ್ಲಿ ಅಲ್ಲಿ ಯಾವುದೇ ಪರಿಶಿಷ್ಟ ವರ್ಗದ ಕಾಲೋನಿ ಇಲ್ಲವೆಂದು ಕೊಟ್ಟಿದ್ದಾರೆ. ನಮ್ಮ ಹತ್ತಿರ ಆ ಪ್ರದೇಶದ ಜನ ಸಾಮಾನ್ಯರು ಪರಿಶಿಷ್ಟ ವರ್ಗದವರು ಪುರಸಭೆಗೆ ಕೊಟ್ಟಂಥ ಲಾಯರ್ ನೋಟಿಸ್‌ನ ಬಗ್ಗೆ ನಾನು ಗಮನ ಸೆಳೆಯಬಯಸುತ್ತೇನೆ. ಅಲ್ಲಿರುವಂಥ ಶಾಲೆಯನ್ನು ಪಕ್ಕದ ಇರಾ ಗ್ರಾಮಕ್ಕೆ ಬಹುಶಃ ಆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸುಮಾರು ಮೂರುವರೆ ಕಿಲೋಮೀಟರ್ ಇದೆ. ಇರಾ ಗ್ರಾಮಕ್ಕೆ ಆ ಶಾಲೆಯನ್ನು ಸ್ಥಳಾಂತರಿಸುತ್ತೇವೆ ಎನ್ನುವ ಬೇಜವಾಬ್ದಾರಿ ಉತ್ತರ ಕೊಟ್ಟಿದ್ದಾರೆ. ಶಾಲೆಯನ್ನು ಸ್ಥಳಾಂತರಿಸುತ್ತೀರಿ ಆದರೆ ಅಲ್ಲಿರುವಂಥ ಸುಮಾರು ಅರವತ್ತು ಮನೆಗಳನ್ನು ಮತ್ತು ಅಲ್ಲಿರುವಂಥ ಜನ ಸಾಮಾನ್ಯರನ್ನು ಏನು ಮಾಡುತ್ತೀರಿ? ಅದಕ್ಕಿಂತಲೂ ಅದರ ಪಕ್ಕದಲ್ಲಿ ನಮ್ಮ ಬಂಟ್ವಾಳ ಪುರಸಭೆಯ ಐದಾರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬಹುಶಃ ಸರ್ವೆ ನಂಬರ್ 202ರಲ್ಲಿ ಸರ್ಕಾರಿ ಜಾಗ ಸುಮಾರು ಹತ್ತು ಎಕರೆಯಿದೆ. ಯಾರಿಗೂ ತೊಂದರೆಯಾಗದಂತೆ ಆ ಕ್ರಮ ಕೈಗೊಂಡರೆ ಉತ್ತಮವಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ನನ್ನ ಕಳಕಳಿಯ ಮನವಿ ಏನೆಂದರೆ, ಇದಕ್ಕೆ ತಡೆಯನ್ನು ಕೊಡಬೇಕು. ಅಗತ್ಯಬಿದ್ದರೆ ಸಚಿವರು ಬಹುಶಃ ಮಂಗಳೂರಿಗೆ ಬಂದಾಗ ತಾವೇ ಭೇಟಿ ನೀಡಿ ತಮಗೆ ಅದು ಸರಿ ಕಂಡರೆ ತಾವು ಯಾವುದೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ನನ್ನ ಸ್ವಾಗತವಿದೆ. ಆದರೆ, ಈಗಲೇ ಅದನ್ನು ನಿಲ್ಲಿಸುವಂಥ ಆದೇಶವನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಜನರ ಪರವಾಗಿ ವಿನಂತಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಘನತ್ಯಾಜ್ಯ ವಿಲೇವಾರಿ ತಾವು ಎಲ್ಲಾ ಊರಿನಲ್ಲಿ ಮಾಡಬೇಕು. 2009ನೇ ಡಿಸೆಂಬರೊಳಗೆ ಮಾಡಬೇಕೆಂದು ಇಡೀ ದೇಶದಲ್ಲಿ ಒಂದು mandate ಕೊಟ್ಟಿದ್ದಾರೆ. ಈಗ ಈ ಸಂಬಂಧಿತ ಒಂದು ಜಾಗ ಸುಮಾರು 8.55 ಎಕರೆ ಏನಿದೆ, ಇದರ ಬಗ್ಗೆ ನಾವು ಸಾರ್ವಜನಿಕರ ಆಕ್ಷೇಪಣೆಯನ್ನು ಕೂಡ ಕರೆದಿದ್ದೆವು. ಯಾರೂ ಕೂಡ ಆಕ್ಷೇಪಣೆ ಸಲ್ಲಿಸಿಲ್ಲ. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅದಕ್ಕೆ ಸೂಕ್ತವಾದ ಪತ್ರ ಕೂಡ ಕೊಟ್ಟಿದ್ದಾರೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಯಾವುದೇ ಕಾಲೋನಿ ಅಲ್ಲಿ ಇಲ್ಲ. ಇರುವುದು ಅನಧಿಕೃತವಾದ ಕೆಲವು ಕಾರ್ಮಿಕರ ಮನೆಗಳು. ಅದಕ್ಕೋಸ್ಕರ ನಾವು ಇಡೀ ರಾಜ್ಯದಲ್ಲಿ ಎಲ್ಲಿ ಹೋದರೂ ಇದು ಒಂದು ಸಮಸ್ಯೆ.

ಸಮಸ್ಯೆಗಳನ್ನು ಆದಷ್ಟು ಕಡಿಮೆ ಮಾಡಿ ಇದನ್ನು ಮಾಡಲಿಕ್ಕೆ ಸದಸ್ಯರು ಸಲಹೆ ಕೊಡಿ. ಅವರು ಹೇಳಿದ ಹಾಗೆ ಅಗತ್ಯ ಬಿದ್ದರೆ ನಾನೂ ಕೂಡ ಹೋಗಿ ಜಾಗ ಪರಿಶೀಲಿಸುತ್ತೇನೆ.

ಶ್ರೀ ಯು.ಟಿ. ಖಾದರ್: ಸಾರ್ವಜನಿಕರ ಯಾವುದೇ ಆಕ್ಷೇಪಣೆಯಿಲ್ಲವೆಂದು ಹೇಳಿದರು. ಇಡೀ ಊರಿನವರು ಪಂಚಾಯಿತಿಯವರು ಆಕ್ಷೇಪಣೆಗಳನ್ನು ಕೊಟ್ಟು ಎರಡೆರಡು ಸಲ ಅಲ್ಲಿ ಮೀಟಿಂಗ್ ಮಾಡಿದ್ದು ಇದೆ. ಆರೋಗ್ಯದ ಬಗ್ಗೆ ಪರಿಸರದ ಬಗ್ಗೆ ಹೇಳಿದರು. ಅಲ್ಲಿ ಡಾಕ್ಟರ್ ಕೂಡ ಇಲ್ಲಿ ಮಾಡುವುದು ಸರಿಯಲ್ಲ ಬಹಳ ಹತ್ತಿರದಲ್ಲಿರುವುದರಿಂದ ಮಕ್ಕಳಿಗೆ ತೊಂದರೆಯಾಗುತ್ತದೆಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನಾನು ಸಚಿವರ ಗಮನಕ್ಕೆ ತರಲಿಕ್ಕಿಚ್ಚಿಸುತ್ತೇನೆ. ನಿಜವಾಗಿಯೂ ಈ ಘನತ್ಯಾಜ್ಯ ವಿಲೇವಾರಿ ಸ್ಥಳವನ್ನು ಇನ್ನೊಂದು ಪ್ರದೇಶದಲ್ಲಿ ಅಂದರೆ ಅಲ್ಲಿ ಮನೆ ಇರಲಿಲ್ಲ ಅಲ್ಲಿಗೆ ಸೀಮಿತವಾಗಿತ್ತು. ಅಲ್ಲಿ ಕೆಲವು ಪ್ರಭಾವಿ ಶಕ್ತಿಗಳು ಆ ಒಂದು ಬಂಟ್ವಾಳ ಪುರಸಭೆಯಿಂದ ಎತ್ತಿಕೊಂಡು ತಂದು ಇಲ್ಲಿ ಹಾಕಿದ್ದಾರೆ. ಬಂಟ್ವಾಳ ಕ್ಷೇತ್ರವ್ಯಾಪ್ತಿಯ ಘನತ್ಯಾಜ್ಯವೂ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲ. ಬಂಟ್ವಾಳ ವಿಧಾನ ಸಭೆ ಕ್ಷೇತ್ರದನ್ನು ಹದಿನೈದು ಕಿಲೋಮೀಟರ್ ದೂರದಲ್ಲಿ ಬಂದು ನನ್ನ ಕ್ಷೇತ್ರಕ್ಕೆ ತರುವಂಥ ಅಗತ್ಯ ಏನಿದೆ? ಆದಕಾರಣ ಬಹುಶಃ ಕೊಟ್ಟಂಥ ಮಾಹಿತಿ ಸಂಪೂರ್ಣವಾಗಿ ತಪ್ಪಾದ ಮಾಹಿತಿಯನ್ನು ಸಂಬಂಧಪಟ್ಟ ಪುರಸಭೆಯವರು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಅಲ್ಲಿ ಯಾವುದು ಇದೆ ನ್ಯಾಯದ ಪರವಾಗಿ ಸತ್ಯದ ಪರವಾಗಿ ಇರುವ ರೀತಿಯಲ್ಲಿ ಅಲ್ಲಿ ಜನಗಳ ತೊಂದರೆಯಾಗುವುದು ಬೇಡ ಎನ್ನುವುದು ನನ್ನ ಕಳಕಳಿ. ತಮಗೆ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ, ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ ಮೂರು ಮೂರು ಸಲ ಊರಿನಲ್ಲಿ ಪ್ರತಿಭಟನೆಯಾಗಿದೆ. ಆದಕಾರಣ ಸಚಿವರು ನಿಮ್ಮ ಮೂಲಕ ನಮ್ಮ ರಕ್ಷಣೆಗೆ ಬರಬೇಕು. ತಕ್ಷಣ ಅದಕ್ಕೆ ತನಿಖೆ ಮಾಡಿ ನಂತರ ಕ್ರಮ ಕೈಗೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಬಂಟ್ವಾಳ ಪುರಸಭೆಯದು ಪತ್ರ ಇಲ್ಲಿದೆ. ಯಾವುದೇ ರೀತಿ ಆಕ್ಷೇಪಣೆಯಿಲ್ಲ ಯಾರಿಗೂ ಕೂಡ ತೊಂದರೆಯಾಗುವುದಿಲ್ಲ ತ್ಯಾಜ್ಯವಸ್ತು ವಿಲೇಯನ್ನು ವೈಜ್ಞಾನಿಕ ರೀತಿಯಾಗಿ ಪರಿಸರ ಇಲಾಖೆಯ ಮಾರ್ಗಸೂಚಿಯಂತೆ ಮಾಡಲಾಗುವುದು ಎಂದು ಬಹಳ ಸ್ಪಷ್ಟವಾಗಿ ಮುಖ್ಯಾಧಿಕಾರಿ ಹೇಳಿದ್ದಾರೆ. ಅಗತ್ಯ ಬಿದ್ದರೆ ನಾನು ಹೋಗಿ ಸ್ಥಳ ಪರಿಶೀಲಿಸುತ್ತೇನೆ.

ಶ್ರೀ ಯು.ಟಿ ಖಾದರ್: ಸಚಿವರೆ ನಿಮಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆಕ್ಷೇಪಣೆ ಅಲ್ಲಿ ಇದೆ. ಪುರಸಭೆಯಿಂದಲೇ ತಪ್ಪು ಮಾಹಿತಿ ಬಂದಿದೆ.

ಅಧ್ಯಕ್ಷರು: ಸ್ಪಾಟ್ ನೋಡಿ ಮಾಡುತ್ತೇನೆಂದು ಹೇಳಿದ್ದಾರೆ. ಆಯಿತು ಮಾಹಿತಿ ಕೊಡಿ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ತಾವು ಕೇಳಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಇಷ್ಟು ಬೇಗ ತೆಗೆದುಕೊಳ್ಳುತ್ತಾರೆಂದು ಅವರಿಗೆ ಬಹುಶಃ ಗೊತ್ತಿರಲಿಲ್ಲ.

ಅಧ್ಯಕ್ಷರು: ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾಳೆ ತೆಗೆದುಕೊಳ್ಳಬಹುದು. ಮಾನ್ಯ ನರೇಂದ್ರ ಬಾಬುರವರ ಗಮನ ಸೆಳೆಯುವ ಸೂಚನೆ ಸಹ ಸಂಬಂಧಪಟ್ಟ ಸಚಿವರು ಅಲ್ಲಿರುವುದರಿಂದ ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಸ್ಟೇಟ್‌ಮೆಂಟ್ ಕೊಟ್ಟು ಮುಗಿಸಿ. ಸಾರಿಗೆ ಸಚಿವರಿಗೆ ಹೇಳಿ ಕಳುಹಿಸಿ.

ಇ) ವಿಷಯ: ಬೆಂಗಳೂರಿನಲ್ಲಿ ಇತೀಚೆಗೆ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ನಡೆದಂತಹ ಸಂದರ್ಭದಲ್ಲಿ ಲಾಠಿ ಪ್ರಹಾರವಾಗಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಬಡಾವಣೆ): ಮಾನ್ಯ ಅಧ್ಯಕ್ಷರೆ, ಸಚಿವರ ಹೇಳಿಕೆ ಬಂದಿದೆ ಸ್ವಾಮಿ.

ಅಧ್ಯಕ್ಷರು: ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಬಡಾವಣೆ): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಇತ್ತಿಚೆಗೆ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ನಡೆದಂಥ ಸಂದರ್ಭದಲ್ಲಿ ಲಾಠಿ ಪ್ರಹಾರವಾಗಿರುವುದು, ಕಾಳಸಂತೆಯಲ್ಲಿ ಟಿಕೇಟ್ ಮಾರಾಟವಾಗಿರುವುದು, ಬೆಂಗಳೂರಿನಲ್ಲಿ ಬೆಟ್ಟಿಂಗ್ ದಂಧೆ ನಡೆಯುತ್ತಿರುವುದು, ಇದರ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಭಾರತ ಮತ್ತು ಇಂಗ್ಲೆಂಡ್ ದೇಶಗಳ ನಡುವೆ ದಿನಾಂಕ: 27.02.2011ರಂದು ನಡೆದ ವಿಶ್ವ ಕಪ್ ಕ್ರಿಕೆಟ್ ಪಂದ್ಯಾವಳಿಯ ಸಂಬಂಧ ಕಾರಣಾಂತರಗಳಿಂದ ಕರ್ನಾಟಕ ರಾಜ್ಯ ಕ್ರಿಕೆಟ್